सत्यमेव जयते
ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

26ನೇ ಡಿಸೆಂಬರ್ 2013

**ಶ್ರೀ ಶಂಭುದಯಾಳ್ ಮೀನಾ ರವರೇ,**

<u>ವಿಷಯ:</u> ನಗರದ ಕೆಲವು ಬಾರ್ ಮತ್ತು ರೆಸ್ಟೋರೆಂಟ್ ಗಳಲ್ಲಿ ಅಪ್ರಾಪ್ತ ವಯಸ್ಸಿನ ಗ್ರಾಹಕರಿಗೆ ಮದ್ಯ ಸರಬರಾಜು ಮಾಡಲಾಗುತ್ತಿರುವ ಕುರಿತು.

ಬೆಂಗಳೂರಿನ ಯು.ಬಿ.ಸಿಟಿಯಲ್ಲಿರುವ ಅನೇಕ ರೆಸ್ಟೋರೆಂಟ್, ಬಾರ್ ಮತ್ತು ಲೌಂಜ್ ಗಳಲ್ಲಿ 18 ವರ್ಷದ ಒಳಗಿನ ಮಕ್ಕಳಿಗೆ ಕಾನೂನು ವಿರುದ್ಧವಾಗಿ ಮದ್ಯವನ್ನು ಸರಬರಾಜು ಮಾಡಲಾಗುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಇತ್ತೀಚಿನ ದಿನಗಳಲ್ಲಿ ಹದಿಹರೆಯದ ಮಕ್ಕಳು ಮದ್ಯಪಾನಿಗಳಾಗುತ್ತಿರುವುದು, ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ, ತೀರ ಸಾಮಾನ್ಯವಾಗಿ ಬಿಟ್ಟಿದೆ. ಇಲ್ಲಿ ನಿಯಮಗಳು ಕಡ್ಡಾಯವಾಗಿ ಪಾಲನೆಯಾಗುತ್ತಿರುವುದನ್ನು ಖಚಿತಪಡಿಸುವಂತೆ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು.

ಅಪ್ರಾಪ್ತರ ಮದ್ಯಸೇವನೆ ಕಾನೂನುಬಾಹಿರವಾಗಿರುವ ಜೊತೆಗೆಯೇ, ಅತಿಮುಖ್ಯವಾಗಿ ಹದಿಹರೆಯದ ಮಕ್ಕಳ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮದ್ಯಸೇವನೆಯು, ವಿಶೇಷವಾಗಿ ಹದಿಹರೆಯದ ಮಕ್ಕಳ, ಮೆದುಳಿನ ಜೀವಕೋಶಗಳಿಗೆ ಹಾನಿಕಾರಕವಾಗಿದ್ದು, ಮಕ್ಕಳ ನಿರ್ಧಾರ ತೆಗೆದುಕೊಳ್ಳುವ ಶಕ್ತಿ, ಚಿಂತನಾ ಶಕ್ತಿ ಮತ್ತು ನೆನಪಿನ ಶಕ್ತಿಯನ್ನು ಹಾಳುಗೆಡವುತ್ತದೆಯೆಂದು ಅಧ್ಯಯನ ವರದಿಗಳು ಖಚಿತಪಡಿಸಿವೆ.

ಆದ್ದರಿಂದ, ನಿಯಮಗಳನ್ನು ಪಾಲಿಸದಿರುವ ರೆಸ್ಟೋರೆಂಟ್, ಬಾರ್ ಮತ್ತು ಇತರ ವಾಣಿಜ್ಯ ಕೇಂದ್ರಗಳ ವಿರುದ್ಧ ಕ್ರಮ ತೆಗೆದುಕೊಂಡು ಸೂಕ್ತ ದಂಡನೆಗೆ ಗುರಿಮಾಡಬೇಕು. ಕಾನೂನು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ, ಅಂಗೀಕಾರಾರ್ಹ ದಾಖಲೆಗಳಿಂದ ಅಪ್ರಾಪ್ತರಲ್ಲವೆಂದು ಖಚಿತಪಡಿಸಿಕೊಂಡ ಮೇಲೆಯೇ ಮದ್ಯೋತ್ಪನ್ನಗಳು ನೀಡಬೇಕು. ಈ ಸಂಬಂಧ ತನಿಖೆ ನಡೆಸಿ, ಅಗತ್ಯ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ತಮ್ಮ ವಿಶ್ವಾಸಿ

ರಾಜೀವ್ ಚಂದ್ರಶೇಖರ್

**ಶ್ರೀ ಶಂಭುದಯಾಳ್ ಮೀನಾ, ಭಾ.ಆ.ಸೇ.,**
ಅಬಕಾರಿ ಆಯುಕ್ತರು
2ನೇ ಮಹಡಿ, ಟಿಟಿಎಂಸಿ ಎ ಬ್ಲಾಕ್
ಬಿಎಂಟಿಸಿ ಕಟ್ಟಡ, ಶಾಂತಿನಗರ

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham: VU2RCL